†ಶ್ರೀ ಎಚ್. ಎಂ. ಚನ್ನಬಸಪ್ಪ .—ಅಂಥಾ ಅಗತ್ಯಗಳು ಕಂಡುಬರುತ್ತಿಲ್ಲ ಎಂದು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ .—ಮೈಸೂರು ಸ್ಟೇಟ್‌ಗೆ ಸಂಬಂಧಪಟ್ಟ ಎನ್.ಎಂ.ಆರ್. ಸ್ಟಾಫ್ ಮಂತ್ರಿ ವರ್ಕ್ ಚಾರ್ಜ್ಡ್ ಶಿಬ್ಬಂದಿಗೆ ಕೊಡತಕ್ಕ ಸೌಲಭ್ಯಗಳನ್ನು ತುಂಗಭದ್ರಾ ಡ್ಯಾಂನಲ್ಲಿ ಕೆಲಸಮಾಡುತಿರುವ ಸಿಬ್ಬಂದಿಗೆ ಕೊಡುತ್ತಿಲ್ಲ. ಅವರಿಗೂ ಆ ಸೌಲಭ್ಯಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಈ ಎರಡರ ನಿಯಮಾವಳಿಗಳು ಬೇರೆ ಬೇರೆ. ಒಂದಕೊಂದಕ್ಕೆ ಯಾವ ಸಂಬಂಧವೂ ಇಲ್ಲ. ಆದ್ದರಿಂದ ಇದರ ನಿಯಮಾವಳಿಗಳು ಅವರಿಗೆ ಅನ್ವಯವಾಗುವುದಿಲ್ಲ.

ERADICATION OF DROUGHT CONDITION IN MADHUGIRI SUB-DIVISION

215. Sri R. Chikkaiah (Madhugiri) .—Will the Minister of State for Major Irrigation be pleased to state .—

(*a*) whether the Government has any plans to eradicate the severe drought conditions prevailing in Madhugiri Sub-Division as a permanent measure ;

(*b*) if so, the plans and when they will be implemented;

(*c*) whether the Government has included the Upper Bhadra Project in such plans, for the benefit of all the taluks of Mahdugiri Sub-Division ?

Sri H. M Channabasappa (Minister for Public Works and Electricity) .—On behalf.

Sri H. N. Nanje Gowda (Minister of State for Major Irrigation)—

(*a*) No.

(*b*) Doues not arise in view of reply to clause (*a*).

(*c*) The scope of Upper Bhadra depends on the allocations of Tungabhadra water to Mysore by the Tribunal.

ಶ್ರೀ ಆರ್. ಚಿಕ್ಕಯ್ಯ .—(ಎ) ಪ್ರಶ್ನೆಗೆ ಉತ್ತರವಾಗಿ—ಇಲ್ಲ ಎಂದು ತಿಳಿಸಲಾಗಿದೆ. ಆದರೆ ಮಧುಗಿರಿ ತಾಲ್ಲೂಕ್ ಪದೇ ಪದೇ ಕ್ಷಾಮಕ್ಕೆ ತುತ್ತಾಗುತ್ತಿರುವುದರಿಂದ ಆಗಾಗ್ಗೆ ಕೇಂದ್ರ ಸರ್ಕಾರದವರೂ ಕೂಡ ಇದಕ್ಕೆ ಪರಿಹಾರವನ್ನು ಒದಗಿಸಿದ್ದಾರೆ. ಅಂದಾಗ ರಾಜ್ಯ ಸರ್ಕಾರದವರು ಇಲ್ಲಿಯ ಜನರ ಕಷ್ಟ ತಪ್ಪಿಸುವುದಕ್ಕೆ ಏನಾದರೂ ಯೋಜನೆಯನ್ನು ರೂಪಿಸುವರೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ .—ಆ ಆಲೋಚನೆ ಸದ್ಯದಲ್ಲಿ ಇಲ್ಲ ಎಂದು ಹೇಳಿದ್ದೇನೆ.

ಶ್ರೀ ಆರ್. ಚಿಕ್ಕಯ್ಯ .— ಈ ಪ್ರದೇಶಕ್ಕೆ ಅಪ್ಪರ್‌ಭದ್ರಾ ಆಣೆಕಟ್ಟಿನಿಂದ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಅಧ್ಯಕ್ಷರು .—ತಮ್ಮ ಉಪಪ್ರಶ್ನೆಗೆ ಉತ್ತರವಾಗಿ ಅಚ್ಚಾಗಿರತಕ್ಕ (ಸಿ) ಭಾಗದ ಉತ್ತರವನ್ನು ದಯವಿಟ್ಟು ನೋಡಿ.

ಶ್ರೀ ಕೆ. ಎನ್. ವೀರಪ್ಪಗೌಡ .—ಹಾಲಿ ಕಟ್ಟಿರತಕ್ಕ ಭದ್ರಾ ಪ್ರಾಜೆಕ್ಟಿಗೇ ಸಾಕಷ್ಟು ನೀರು ಬಾರದಿರುವಾಗ ಅಲ್ಲಿಯ ನೀರನ್ನು ಬೇರ ಕಡೆಗೆ ಡೈವರ್ಟ್ ಮಾಡಿದರೆ ಆ ಕಟಿ ರತಕ್ಕ ಪ್ರಾಜೆಕ್ಟಿಗೆ ತೊಂದರೆ ಬರುವುದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಸದ್ಯಕ್ಕೆ ಆ ಆಲೋಚನೆಯೇ ಇಲ್ಲ. ಒಂದು ವೇಳ ಅಂಥಾ ಸಂದರ್ಭ ಉಂಟಾದರೆ ಹಾಲಿ ಇರತಕ್ಕ ಪ್ರಾಜೆಕ್ಟಿಗೆ ಯಾವ ತೊಂದರೆಯೂ ಬಾರದಂತೆ ನೋಡಿ ಕೊಂಡೇ ಸರ್ಕಾರದವರೂ ಯಾವಾಗಲು ಕೆಲಸಮಾಡುತ್ತಾರೆಂಬುದನ್ನು ತಿಳಿಸುವುದಕ್ಕೆ ಅಪೇಕ್ಷಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ .—ಮಧುಗಿರಿ ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶ ಎಂದು ಸಾರಿದ್ದರೂ ಅದರ ಪಕ್ಕದಲ್ಲಿರತಕ್ಕ ಸಿರಾ ತಾಲ್ಲೂಕಿನಲ್ಲಿದ್ದ ಸಾಯಿಲ್ ಕನ್‌ಸರ್ವೇಷನ್ ಇಲಾಖೆಯನ್ನು ಅಲ್ಲಿಂದ ಬೀದರಿಗೆ ವರ್ಗಾಯಿಸಿದ್ದಾರೆ. ಅದನ್ನು ಮಂತ್ರಿ ಸಿರಾ ತಾಲ್ಲೂಕಿಗೇ ವರ್ಗಾಯಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಸಭೆಯ ಮುಂದಿರತಕ್ಕ ಪ್ರಶ್ನೆಯಿಂದ ತಮ್ಮ ಉಪಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಿದರೆ ಸಾಕು.

ಶ್ರೀ ಬಿ. ಇ. ರಾಮಯ್ಯ .—ತುಂಗಭದ್ರಾ ಡ್ಯಾಂನಲ್ಲಿ ನಮ್ಮ ಭಾಗಕ್ಕೆ ನೀರು ಸಾಲದಿರುವಾಗ ಅಲ್ಲಿರತಕ್ಕ ಜನರಿಗೇ ಈಗ ಶೇ : ೨೫ ರಷ್ಟು ನೀರನ್ನು ಕಟ್ ಮಾಡಿದ್ದಾರೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಆ ತುಂಗಭದ್ರಾ ಡ್ಯಾಂನ ನೀರಿಗೂ ಮಂತ್ರಿ ಮಧುಗಿರಿಗೂ ಯಾವ ಸಂಬಂಧವೂ ಇದ್ದಹಾಗೆ ಕಾಣುವುದಿಲ್ಲ.

ಶ್ರೀ ಟಿ. ತಾರೇಗೌಡ.—ಗೋದಾವರಿ ನೀರನ್ನು ತುಂಗಭದ್ರಾಕ್ಕೆ ಡೈವರ್ಟ್ ಮಾಡುವುದಕ್ಕೆ ಅವಕಾಶ ಇರುವುದರಿಂದ, ಆ ನೀರನ್ನು ಅಲ್ಲಿ ಡೈವರ್ಟ್ ಮಾಡಿ ಇಲ್ಲಿ ಉಳಿಯುತಕ್ಕ ಹೆಚ್ಚಿನ ನೀರನ್ನು ಮಧುಗಿರಿಗೆ ಏಕೆ ಕೊಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಗೋದಾವರಿ ನದಿಯ ನೀರನ್ನು ತುಂಗಭದ್ರಾಕ್ಕೆ ತಿರುಗಿಸಲು ಸಾಧ್ಯವಿಲ್ಲ.

ಶ್ರೀ ಆರ್. ಚಿಕ್ಕಯ್ಯ .—ಇಲ್ಲಿ ಪದೇ ಪದೇ ಕ್ಷಾಮದ ತೊಂದರೆ ಇರುವುದರಿಂದ ಈ ಪ್ರದೇಶಕ್ಕೆ ಯಾವುದಾದರೊಂದು ಶಾಶ್ವತವಾದ ಪರಿಹಾರ ಕ್ರಮವನ್ನು ಸರ್ಕಾರದವರು ಒದಗಿಸಬೇಕಾದದ್ದು ಅಗತ್ಯವಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಹಾಗೆ ರಾಜ್ಯದಲ್ಲಿ ಎಲ್ಲೆಲ್ಲಿಗೆ ಪರಿಹಾರಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೋ ಅಂಥಾ ಕಡೆಗಳಲ್ಲಿ ಅವುಗಳನ್ನು ಒದಗಿಸುವುದಕ್ಕೆ ಸರ್ವ ಪ್ರಯತ್ನಗಳನ್ನೂ ಸರ್ಕಾರ ಪಡೆಸುವುದಕ್ಕೆ ಸಿದ್ಧವಾಗಿದೆ.

Asterisks indicate that remarks or speaches have not been revised by the member concerned.

L. F. DISPENSARY BUILDINGS AT CHELUR AND HAGALWADI

228. SRI T. TARE GOWDA (Kallambella).—

Will the Minister for Health be pleased to state.—